**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳೆನರಸೀಪುರ**

ಫ್ರಾಸ –1

**CC No**: 1126/2023 ಚಾಸ- 1

| | |
|---|---|
| ಹೆಸರು | **ರೂಪ ವಿ ಕೆ.** |
| ಗಂಡನ ಹೆಸರು | **ನಾಗೇಶ ಹಚ್.ಸಿ.** |
| ವಯಸ್ಸು | **35 ವರ್ಷ** |
| ಉದ್ಯೋಗ | **ಅಬಕಾರಿ ನಿರೀಕ್ಷಕರು, ಕೆ ಎಸ್ ಡಿ. ಸಿ ಹಾಸನ** |
| ವಾಸಸ್ಥಳ | **ಹಾಸನ** |

ದಿನಾಂಕಃ 22.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ–**

ನಾನು ದಿಃ 18.12.2022 ರಿಂದ 23.03.2023ರ ವರೆಗೆ ನಾನು ಹೊಳೆನರಸೀಪುರ ವಲಯ ಕಚೇರಿಯಲ್ಲಿ ಅಬಕಾರಿ ಉಪ ನೀರಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 23.03.2023 ರಂದು ಸಂಜೆ 4–30 ಗಂಟೆ ಸಮಯದಲ್ಲಿ ಬಿದರಕ್ಕ ಗ್ರಾಮದಲ್ಲಿ ಗಸ್ತು ಕರ್ತವ್ಯವ್ಯದಲ್ಲಿದ್ದಾಗ ಬಾತ್ಮಿ ಬಂದಿದ್ದು, ಬಾತ್ಮೀಯಲ್ಲಿ ನಿಡುವಣಿ ಗ್ರಾಮದ ಹೊನ್ನಪ್ಪ ಬಿನ್ ಲೇಟ್ ಕಾಳಯ್ಯ ಎನ್ನುವವರು ತಮ್ಮ ಮನೆಯಲ್ಲಿ ಅಕ್ರಮವಾಗಿ ಮಧ್ಯವನ್ನು ಹೊಂದಿದ್ದಾರೆ ಎಂದು ತಿಳಿಸಿದ್ದು, ಆ ಮೇರೆಗೆ ನಾನು 4–45 ಗಂಟೆ ನಿಡುವಣಿ ಗ್ರಾಮಕ್ಕೆ ಬಂದಿದ್ದು, ಸದರಿ ಗ್ರಾಮದ ರಸ್ತೆ ಬದಿ ನಿಂತಿದ್ದ ಚಾಸಾ 4 ಮತ್ತು 5 ರವರನ್ನು ಪರಿಚಯ ಮಾಡಿಕೊಂಡು ಅವರಿಗೂ ಸಹಾ ಬಾತ್ಮೀ ವಿಷಯ ತಿಳಿಸಿ

ಪಂಚರಾಗಿ ಬರುವಂತೆ ವಿನಂತಿಸಿಕೊಂಡಿದ್ದು, ಅದಕ್ಕೆ ಅವರು ಒಪ್ಪಿಕೊಂಡಿರುತ್ತಾರೆ. ನಂತರ ಚಾಸಾ 4 ಮತ್ತು 5 ರವರಿಗೆ ನೋಟಿಸು ಜಾರಿ ಮಾಡಿ ಅವರ ಸಹಿ ಪಡೆದಿರುತ್ತೇನೆ. ನಂತರ ಶೋದನಾ ಸಮುಚ್ಚಿತ ವರದಿಯನ್ನು ತಯಾರಿಸಿ ಪಂಚರು, ಸಿಬ್ಬಂದಿಗಳೊಂದಿಗೆ ಬಾತ್ಮೀ ಬಂದ ಸ್ಥಳಕ್ಕೆ ಹೋಗಿ ಎಲ್ಲರೂ ಅಂಗಶೋದನೆ ಮಾಡಿಕೊಂಡು ಆರೋಪಿಯ ಮನೆಯ ಮಂಭಾಗದ ತೆರೆದ ಕೊಠಡಿಯಲ್ಲಿ ಪಂಚರ ಸಮಕ್ಷಮ ಶೋಧಿಸಿದಾಗ ಅಲ್ಲಿ ಕೆಂಪು ಬಣ್ಣದ ಚೀಲ ಕಂಡು ಬಂದಿದ್ದು, ಅದನ್ನು ತೆಗೆದು ನೋಡಲಾಗಿ ಅದರಲ್ಲಿ 90 ಎಂ. ಎಲ್. ನ 45 ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕೇಟುಗಳು ಇರುವುದು ಕಂಡು ಬಂದಿತು. ಅವುಗಳ ಒಟ್ಟು ಮೊತ್ತ ರೂ.1,581/- ರೂಪಾಯಿ ಇದ್ದು, ಒಟ್ಟು 4.050 ಲೀಟರ್ ಇದ್ದದ್ದು ಕಂಡು ಬಂತ್ತು. ನಂತರ ಪರವಾನಿಗೆಯ ಬಗ್ಗೆ ವಿಚಾರಿಸಲಾಗಿ ಆರೋಪಿ ಯಾವುದೇ ಪರವಾನಗಿ ಇಲ್ಲ ಎಂದು ತಿಳಿಸಿರುತ್ತಾರೆ. ನಂತರ ಸದರಿ ಮಧ್ಯದ ಟೆಟ್ರಾ ಪ್ಯಾಕೇಟುಗಳನ್ನು ಚೀಲದ ಸಮೇತ ಜಪ್ತಿಪಡಿಸಿಕೊಂಡು ರಾಸಾಯನಿಕ ಪರೀಕ್ಷೆಗಾಗಿ ಎಲ್ಲವನೂ ಅದೇ ಚೀಲದಿಂದ ಪ್ಯಾಕ್ ಮಾಡಿ ಅದರ ಮೇಲೆ 343 ಅರಗಿನ ಸೀಲನ್ನು ಹಾಕಿ ಅದರ ಮೇಲೆ ಪಂಚರ ಮತ್ತು ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿ ಸ್ಥಳದಲ್ಲಿ ಮಾದರಿ ಸೀಲನ ನಕಲನ್ನು ತಯಾರಿಸಿರುತ್ತೇನೆ. ಪಂಚನಾಮೆಯನ್ನು ಸಂಜೆ 5-30 ರಿಂದ 6-30 ಗಂಟೆಯವರೆಗೆ ಮಾಡಿ, ಆ ಸಮಯದಲ್ಲಿ ನನ್ನ ಮೊಬೈಲ್ ನಲ್ಲಿ ಪೋಟೋಗಳನ್ನು ತೆಗೆಸಿರುತ್ತೇನೆ. ನಂತರ ಜಪ್ತಿಪಡಿಸಿಕೊಂಡ ವಸ್ತು ಮತ್ತು ಆರೋಪಿಯೊಂದಿಗೆ ವಾಪಸ್ ಠಾಣೆಗೆ ಬಂದು ಸ್ವದೂರನ್ನು ತಯಾರಿಸಿ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ತಯಾರಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಗಳಿಗೆ ನೀಡಿರುತ್ತೇನೆ.

ಆರೋಪಿ ಉಸಿರಾಟದ ತೊಂದರೆ ಇದೆ ಎಂದು ತಿಳಿಸಿದ್ದರಿಂದ ಆತನಿಗೆ ಸಿ ಆರ್ ಪಿ ಸಿ ಕಲಂ 41ರ

ಅಡಿಯಲ್ಲಿ ನೋಟಿಸು ಜಾರಿ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 8 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಸಾಕ್ಷಿ ಶೋಧನಾ ಸಮುಚ್ಚಿತ ವರದಿ, ಮಹಜರ್, ಸ್ಕೆಚ್, ನಿವೇದನಾ ಪತ್ರ, ನೋಟಿಸು, ಕಚ್ಚಾ ನಕ್ಷೆ, ಪ್ರ.ವ.ವರದಿ, ಪೋಟೋ, ಸಿ.ಡಿ. ಹಾಗೂ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದರಿಂದ, ಶೋಧನಾ ವರದಿಯನ್ನು ನಿಪಿ.1 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ 1(ಎ) ಎಂದು, ಮಹಜರ್ ಅನ್ನು ನಿಪಿ 2, ಸಾಕ್ಷಿದಾರರ ಸಹಿಯನ್ನು 2(ಎ) ಎಂದು, ಸ್ಕೆಚ್ ಅನ್ನು ನಿಪಿ 3 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ 3(ಎ) ಎಂದು, ನಿವೇದನಾ ಪತ್ರ ವನ್ನು ನಿಪಿ 4, ಸಾಕ್ಷಿದಾರರ ಸಹಿಯನ್ನು 1(ಎ), 2 ನೋಟಿಸಗಳನ್ನು ನಿಪಿ 5 ಮತ್ತು 6 ಎಂದು, ಸಾಕ್ಷಿದಾರರ ಸಹಿಗಳನ್ನು 5(ಎ) ಮತ್ತು 6(ಎ) ಎಂದು, 3 ಪೋಟೋಗಳನ್ನು ನಿಪಿ 7 ರಿಂದ 9 ಎಂದು, ಸಿಡಿ.ಯನ್ನು ನಿಪಿ 10 ಎಂದು, 65(ಬಿ) ಸರ್ಟಿಫಿಕೇಟ್ ಅನ್ನು 11 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ11(ಎ) ಎಂದು, ಪ್ರ.ವ. ವರದಿಯನ್ನು ನಿಪಿ12, ಸಾಕ್ಷಿದಾರರ ಸಹಿಯನ್ನು 12(ಎ) ಎಂದು, ಮಾಲು ಪಟ್ಟಿಯನ್ನು 13, ಸಾಕ್ಷಿದಾರರ ಸಹಿಯನ್ನು 13(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯನ್ನು ನೋಡಿ ಗುರುಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಕೆಂಪು ಬಣ್ಣದ ಚೀಲ ಮತ್ತು ಟೆಟ್ರಾ ಪ್ಯಾಕೇಟುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಒಟ್ಟಾಗಿ ಎಂ.ಓ. 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ಯಾವ ಯಾವ ಸ್ಥಳಗಳಲ್ಲಿ ಗಸ್ತು ಕರ್ತವ್ಯ ಮಾಡಿರುತ್ತೇವೆ ಎನ್ನುವ ಬಗ್ಗೆ ಮೂಮೆಂಟ್ ರಿಜಿಸ್ಟರ್ ನಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಆ ದಿನ ನಾವು ಠಾಣೆಗೆ ಬಿಟ್ಟಾಗ ಮಧ್ಯಾಹ್ನ 2-00

ಗಂಟೆಯಾಗಿತ್ತು. ಅ ದಿನ ನಾವು ಮೊದಲು ಜೋಡಿಗುಬ್ಬಿಗೆ ಹೋಗಿ ಅಲ್ಲಿ ಒಂದು ಅಂಗಡಿಯನ್ನು ತಪಾಸಣೆ ನಡೆಸಿ ನಂತರ ಬಿದರಕ್ಕ ಗ್ರಾಮಕ್ಕೆ ಗಸ್ತು ಕರ್ತವ್ಯ ಮಾಡಿ, ಕೊನೆಗೆ ನಿಡುವಣೆ ಗ್ರಾಮಕ್ಕೆ ಹೋಗಿರುತ್ತೇವೆ. ಜೋಡಿಗುಬ್ಬಿ ಗ್ರಾಮಕ್ಕೆ ಯಾವ ಮಾರ್ಗವಾಗಿ ಹೋಗಿರುತ್ತೇವೆ ಎಂದು ನೆನಪಿಲ್ಲ. ಜೋಡಿಗುಬ್ಬಿ ಗ್ರಾಮಕ್ಕೆ ಹೋಗಲು ಹೊಳೆನರಸೀಪುರದಿಂದ ಸುಮಾರು 4 ಮಾರ್ಗಗಳು ಇವೆ ಎಂದರೆ ಹೌದು. ಜೋಡಿಗುಬ್ಬಿಗೆ ಹೋಗುವ ಮಾರ್ಗದಲ್ಲಿ ನಾವು ಯಾವುದೇ ತಪಾಸಣೆ ಮಾಡಿಲ್ಲ. ಜೋಡಿಗುಬ್ಬಿಗೆ ಹೋದಾಗ ಸಮಯ ಮಧ್ಯಾಹ್ನ 2-35 ಗಂಟೆಯಾಗಿತ್ತು. ಜೋಡಿಗುಬ್ಬಿ ಗ್ರಾಮದಲ್ಲಿ ಸನ್ನದು ತಪಾಸಣೆ ಮಾಡಿರುತ್ತೇವೆ. ಜೋಡಿಗುಬ್ಬಿ ಯಲ್ಲಿ ಸನ್ನದ್ದು ತಪಾಸಣೆ ಮಾಡಿದ ವಿವರಣೆಯನ್ನು ನಾನು ನಿವೇದನಾ ಪತ್ರದಲ್ಲಿ ಬರೆದಿಲ್ಲ. ಜೋಡಿಗುಬ್ಬಿ ಯಿಂದ ಮಧ್ಯಾಹ್ನ 3-45 ಗಂಟೆಯಾಗಿತ್ತು. ಜೋಡಿಗುಬ್ಬಿ ಯಿಂದ ನಿಡುವಣೆ ಗ್ರಾಮದ ಮಧ್ಯದಲ್ಲಿ ಸುಮಾರು ಗ್ರಾಮಗಳು ಬರುತ್ತವೆ ಅಲ್ಲಿ ಏನಾದರೂ ತಪಾಸಣೆ ಮಾಡಿರುತ್ತೀರಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ನಂತರ ಸಾಕ್ಷಿ ನಿಡುವಣೆ ಯಿಂದ ಬಿದರಕ್ಕ ಗ್ರಾಮದಲ್ಲಿ ಗಸ್ತು ಮಾಡುತ್ತಿದ್ದಾಗ ಮಾಹಿತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಮೊದಲು ಬಿದರಕ್ಕ ಗ್ರಾಮಕ್ಕೆ ಹೋಗಿ ನಂತರ ನಿಡುವಣೆಗೆ ಬಂದಿರುತ್ತೇವೆ. ಜೋಡಿಗುಬ್ಬಿ ಯಿಂದ ಬಿದರಕ್ಕ ಗ್ರಾಮಕ್ಕೆ ಯಾವ ಮಾರ್ಗವಾಗಿ ಹೋಗಿರುತ್ತೇವೆ ಎಂದು ನೆನಪಿಲ್ಲ. ಜೋಡಿಗುಬ್ಬಿ ಯಿಂದ ಹೋದರೆ ಮೊದಲು ನಿಡುವಣೆ ಗ್ರಾಮ ಸಿಗುತ್ತದೆ, ನಂತರ ಬಿದರಕ್ಕ ಗ್ರಾಮ ಬರುತ್ತದೆ ಎಂದರೆ ಸಾಕ್ಷಿ ಹೌದು, ಆದರೆ ಆ ದಿನ ನಾವು ಬಿದರಕ್ಕ ಗ್ರಾಮಕ್ಕೆ ಹೋದಾಗ ಮಾಹಿತಿ ಬಂದಿದ್ದು, ನಂತರ ನಿಡುವಣೆ ಗ್ರಾಮಕ್ಕೆ ಬಂದಿರುತ್ತೇವೆ ಎಂದು ನುಡಿಯುತ್ತಾರೆ. ಬಿದರಕ್ಕ ಗ್ರಾಮಕ್ಕೆ ಹೋದಾಗ 4-30 ಗಂಟೆಯಾಗಿತ್ತು. ಬಿದರಕಕ್ಕೂ ನಿಡುವಣೆಗೂ 3-4 ಕಿ ಮೀ ದೂರವಾಗುತ್ತದೆ. ಆ ದಿನ ಪಂಚರಿಗೆ ನಾವು ಆರೋಪಿಯ ಮನೆಯನ್ನು ತೋರಿಸುವಂತೆ ಕೇಳಿಕೊಂಡಿದ್ದೆವು, ಪಂಚರೇ ನಮಗೆ ಆರೋಪಿಯ ಮನೆಯನ್ನು ತೋರಿಸಿರುತ್ತಾರೆ. ಈ ವಿಷಯವನ್ನು ನಿವೇದನಾ ಪತ್ರದಲ್ಲಿ ಹೇಳಿಲ್ಲ.

ಪಂಚರಿಗೆ ಸ್ಥಳದಲ್ಲಿಯೇ ನೋಟಿಸನ್ನು ಜಾರಿ ಮಾಡಿರುತ್ತೇವೆ. ಆರೋಪಿಯ ಮನೆಯ ಅಕ್ಕ ಪಕ್ಕ ವಾಸದ ಮನೆಗಳು ಇವೆ. ಅಕ್ಕ ಪಕ್ಕದ ವಾಸದ ಮನೆಯವರನ್ನು ಪಂಚರಾಗಿ ಬರುವಂತೆ ನಾನು ಕೇಳಿಲ್ಲ. ಆರೋಪಿಯ ಮನೆಯಲ್ಲಿ ಎಷ್ಟು ಜನ ವಾಸ ಮಾಡುತ್ತಿದ್ದರು ಎಂದು ಗೊತ್ತಿಲ್ಲ, ಆದರೆ ನಾವು ಹೋದಾಗ ಆರೋಪಿ ಒಬ್ಬರೇ ಇದ್ದರು. ಆರೋಪಿಯ ಮನೆಯಲ್ಲಿ ಇರುವ ಜನರ ಬಗ್ಗೆ ನಾನು ಅಕ್ಕಪಕ್ಕದವರಲ್ಲಿ ವಿಚಾರಣೆ ಮಾಡಿಲ್ಲ. ಈ ಬಗ್ಗೆ ಪಂಚರನ್ನೂ ಸಹಾ ನಾನು ವಿಚಾರಣೆ ಮಾಡಿಲ್ಲ. ಆರೋಪಿ ಮತ್ತು ವಸ್ತುಗಳನ್ನು ಜಪ್ತಿಪಡಿಸಿಕೊಂಡು ಠಾಣೆಗೆ ಬಂದು ನಂತರ ನಾನು ನಿವೇದನಾ ಪತ್ರವನ್ನು ತಯಾರಿಸಿರುತ್ತೇನೆ. ಕಾಂಪೌಂಡ್ ನಲ್ಲಿ ಒಂದು ಮೂಲೆಯಲ್ಲಿ ಎಂ.ಓ.1 ಸಿಕ್ಕಿರುತ್ತದೆ. ಎಷ್ಟು ಅಡಿಯ ಕಾಂಪೌಂಡ್ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕಾಂಪೌಂಡ್ ಒಳಗಡೆ ಎಂ.ಓ.1 ಸಿಕ್ಕಿರುತ್ತದೆ. ಮಹಜರ್ ನಲ್ಲಿ ಮಧ್ಯದ ಪೌಚ್‌ಗಳು ಯಾವ ಅಂಗಡಿಯಿಂದ ಸರಬರಾಜು ಆಗಿದ್ದವು ಹಾಗೂ ಬ್ಯಾಚ್ ನಂಬರ್ ಗಳನ್ನು ಬರೆದಿಲ್ಲ ಎಂದರೆ ಸಾಕ್ಷಿ ಮಧ್ಯದ ಪೌಚ್ ಗಳ ಮೇಲೆ ಇರುವ ಭದ್ರತಾ ಚೀಟಿಗಳನ್ನು ಕಿತ್ತು ಹಾಕಲಾಗಿತ್ತು, ಹೀಗಾಗಿ ವಿವರಣೆಯನ್ನು ನಾನು ಮಹಜರ್ ನಲ್ಲಿ ಬರೆದಿಲ್ಲ ಎಂದು ನುಡಿಯುತ್ತಾರೆ. ಮಧ್ಯದ ಪೌಚಿನ ಮೇಲೆ ಮ್ಯಾನುಪ್ಯಾಕ್ಚರಿಂಗ್ ಡೇಟ್ ಮತ್ತು ಮೌಲ್ಯ ಬರೆದಿರುತ್ತಾರೆ ಎಂದರೆ ಹೌದು. ಎಂ.ಓ.1 ರಲ್ಲಿಯ ಪ್ರತಿ ಪೌಚುಗಳ ಮೇಲೆ ಮ್ಯಾನುಪ್ಯಾಕ್ಚರಿಂಗ್ ಡೇಟ್, ಮೌಲ್ಯ, ಬ್ಯಾಚ್ ನಂಬರ್ ಮತ್ತು ಕೆ.ಎಸ್.ಬಿ.ಸಿ.ಯ ಲೇಬಲ್ ಇದೆ ಎಂದರೆ ಹೌದು. ಎಂ.ಓ 1 ರಲ್ಲಿರುವ ಪೌಚುಗಳ ಮೇಲೆ ಇರುವ ಮ್ಯಾನುಪ್ಯಾಕ್ಚರಿಂಗ್ ಡೇಟ್ ಮತ್ತು ನಂಬರ್ ಗಳನ್ನು ನಾನು ಮಹಜರ್ ನಲ್ಲಿ ಬರೆದಿಲ್ಲ. ಎಂ ಓ 1 ರಲ್ಲಿಯ ಪೌಚುಗಳ ಮೇಲೆ ಇರುವ ನಂಬರಿನ ಮೂಲಕ ಸದರಿ ಮಧ್ಯದ ಪೌಚುಗಳು ಯಾವ ಡಿಪೋದಿಂದ ಸರಬರಾಜು ಆಗಿದೆ ಮತ್ತು ಸನ್ನದುದಾರರು ಯಾರು ಡಿಪೋಗೆ ಪೇಟೆಂಟ್ ಹಾಕಿರುತ್ತಾರೆ ಎನ್ನುವ ಬಗ್ಗೆ ತಿಳಿದಕೊಳ್ಳಬಹುದು ಎಂದರೆ ಹೌದು. ಲೈಸೆನ್ಸ್ ಗಳ ಎಲ್ಲಾ ಮಧ್ಯದ ಅಂಗಡಿಗಳಲ್ಲಿ ಎಂ ಓ 1 ರಲ್ಲಿರುವಂತಹ ಮಧ್ಯದ ಪೌಚುಗಳು ಸಿಗುತ್ತವೆ ಎಂದರೆ ಹೌದು.

ನಾವು ಹೋದಾಗ ಆರೋಪಿ ಮನೆಯ ಕಾಂಪೌಂಡ್ ನಲ್ಲಿಯೇ ಇದ್ದರು. ನಮ್ಮನ್ನು ನೋಡಿ ಆರೋಪಿ ತಪ್ಪಿಸಿಕೊಳ್ಳಲು ಪ್ರಯತ್ನ ಮಾಡಿಲ್ಲ, ಆದರೆ ಗಾಬರಿಯಾಗಿದ್ದರು. ಆರೋಪಿಯನ್ನು ಯಾವ ನಿಯಮದಡಿ ಬಿಟ್ಟಿರುತ್ತೇನೆ ಎಂದು ಎಫ್ ಐ ಆರ್ ನಲ್ಲಿ ಹೇಳಿಲ್ಲ, ಆದರೆ ಸಿ ಆರ್ ಪಿ ಸಿ ಕಲಂ 41 ನೋಟಿಸನ್ನು ಜಾರಿ ಮಾಡಿ ತನಿಖೆಗೆ ಹಾಜರಾಗುವಂತೆ ಸೂಚಿಸಿ ಸೂಕ್ತ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಎಂ ಒ 1 ರ ಎಲ್ಲಾ ಮಧ್ಯ ಪೌಚು ಗಳನ್ನು ನಾವೇ ನಮ್ಮ ಇಲಾಖಾ ಜೀಪಿನಲ್ಲಿ ತೆಗೆದುಕೊಂಡು ಹೋಗಿ ಆರೋಪಿಯ ವಿರುದ್ದ ಸುಳ್ಳು ದೂರು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ, ಅಂಗ ಶೋಧನೆಯ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಹೇಳುವಂತೆ ದಿಃ 23.03.2023 ರಂದು ಆರೋಪಿಯ ಮನೆಯ ಮೇಲೆ ಯಾವುದೇ ದಾಳಿ ಮಾಡಿಲ್ಲ ಮತ್ತು ಆತನ ವಶದಿಂದ ಯಾವುದೇ ಮಧ್ಯದ ಪೌಚುಗಳನ್ನು ಸಹಾ ಜಪ್ತಿಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೊಾಪಿ ಆ ದಿನ ಸ್ಥಳದಲ್ಲಿಯೇ ಇರಲಿಲ್ಲ ಎಂದರೆ ಸರಿಯಲ್ಲ. ಕೇವಲ ಇಲಾಖಾ ಅಂಕಿಅಂಶಕ್ಕೋಸ್ಕರ ಆರೊಪಿಯ ವಿರುಧ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಇರದೇ ಇದ್ದರೂ ಸಹಿತ ಆತನನ್ನು ದಸ್ತಗಿರಿ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಸ್ವತ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ, ಎಲ್ಲಾ ದಾಖಲಾತಿಗಳನ್ನು ಠಾಣೆಯಲ್ಲಿಯೇ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ ಮತ್ತು ಪಂಚರ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ, ಎಲ್ಲಾ ದಾಖಲಾತಿಗಳನ್ನು ಠಾಣೆಯಲ್ಲಿಯೇ ತಯಾರಿಸಿ ಠಾಣೆಯಲ್ಲಿಯೇ ಸಹಿಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮೊಬೈಲ್ ರಿಯಲ್ ಮೀ ಕಂಪನಿಯದ್ದು ಇರುತ್ತದೆ. ಪೋಟೊಗಳಿಗೆ ಸಂಬಧಪಟ್ಟಂತೆ ಯಾವ ಅಂಗಡಿಯಲ್ಲಿ ಡೆವಲ್ ಮಾಡಿಸಿರುತ್ತೇವೆ ಎಂಬ ಬಗ್ಗೆ ರಶೀದಿಗಳನ್ನು ಮತ್ತ ಸಿಡಿಯನ್ನು ಎಲ್ಲಿ ಮಾಡಿಸಿರುತ್ತೇವೆ ಎಂಬ ಬಗ್ಗೆ ದಾಖಲಾತಿಗಳನ್ನು

ಹಾಜರುಪಡಿಸಿಲ್ಲ ಎಂದರೆ ಹೌದು. ಸ್ಥಳದಲ್ಲಿಯೇ ಸ್ಕೆಚ್ ಅನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ಇದೇ ಮೊದಲ ಬಾರಿ ನ್ಯಾಯಾಲಯದ ಮುಂದೆ ಆರೋಪಿಯನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಎಂ ಒ 1 ಕ್ಕೂ ಯಾವುದೇ ಸಂಬಂಧ ಇದೇ ಇದ್ದರೂ ಸಹಾ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡುವಣೆಯಿಂದ ಯಾವ ಮಾರ್ಗವಾಗಿ ಠಾಣೆಗೆ ಬಂದಿರುತ್ತೇವೆ ಎಂದು ನೆನಪಿಲ್ಲ. ನಾನು ಯಾವುದೇ ದಾಳಿಯನ್ನು ಮಾಡದೇ ಇರುವುದರಿಂದ ಮಾರ್ಗಗಳನ್ನು ನನಗೆ ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.